# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 122 (251) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 10.12.2024 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ ಯಾವಾಗ ಅಸ್ತಿತ್ವಕ್ಕೆ ಬಂದಿತು; ಇಲ್ಲಿಯವರೆಗೆ ಕೆ.ಐ.ಎ.ಡಿ.ಬಿ ವತಿಯಿಂದ ರಾಜ್ಯದಲ್ಲಿ ಎಷ್ಟು ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪಡಿಸಲಾಗಿದೆ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ 1966 (ಕೆ.ಐ.ಎ.ಡಿ ಅಧಿನಿಯಮ)ರ ಪ್ರಕರಣ 5ರ ಅಡಿಯಲ್ಲಿ ದಿನಾಂಕ:20.06.1966ರ ಸರ್ಕಾರದ ಆದೇಶ ಸಂಖ್ಯೆ: ಸಿಐ 67 ಜಿ.ಎಂ.ಐ 66 ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸಂಯೋಜಿತ ವಾಗಿರುತ್ತದೆ.<br><br>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ರಾಜ್ಯಾದ್ಯಂತ ಒಟ್ಟು 215 ಕೈಗಾರಿಕಾ ಪ್ರದೇಶಗಳ ವಿನ್ಯಾಸ ನಕ್ಷೆಯನ್ನು ಮಂಡಳಿಯಲ್ಲಿ ಅನುಮೋದಿಸಲಾಗಿದ್ದು, ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ) | ಕೆ.ಐ.ಎ.ಡಿ.ಬಿ ವತಿಯಿಂದ ನಿರ್ಮಿಸಿದ ಒಟ್ಟು ನಿವೇಶನಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ನಿವೇಶನ ಹಂಚಿಕೆಯಾಗಿವೆ; ಹಂಚಿಕೆಯಾಗದೆ ಖಾಲಿಯಿರುವ ನಿವೇಶನಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) | ಸದರಿ 215 ಕೈಗಾರಿಕಾ ಪ್ರದೇಶಗಳಲ್ಲಿ 59,541 ಎಕರೆ ವಿಸ್ತೀರ್ಣವು ಹಂಚಿಕೆಗೆ ಲಭ್ಯವಾದ ಪ್ರದೇಶವಾಗಿರುತ್ತದೆ. ಈ ಪೈಕಿ ತಕರಾರು ಇರುವ ವಿಸ್ತೀರ್ಣ, ಇನ್ನೂ ಅಭಿವೃದ್ಧಿಪಡಿಸಲಾಗುತ್ತಿರುವ ವಿಸ್ತೀರ್ಣ ಹೊರತುಪಡಿಸಿ 41,607.60 ಎಕರೆ ಜಮೀನನ್ನು 24,718 ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗಿರುತ್ತದೆ.<br><br>ಮುಂದುವರೆದು, ಕಳೆದ ಮೂರು ವರ್ಷಗಳಲ್ಲಿ ಅಭಿವೃದ್ಧಿಪಡಿಲಾಗಿರುವ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಲಭ್ಯವಿರುವ ಜಮೀನಿನ ವಿಸ್ತೀರ್ಣ **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಇ) | ಕೆ.ಐ.ಎ.ಡಿ.ಬಿ ಯ ಸಿ.ಎ. ನಿವೇಶನಗಳನ್ನು ಯಾವ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತದೆ; ಅದಕ್ಕೆ ಇರುವ ಮಾನದಂಡಗಳೇನು; ಇಲ್ಲಿಯವರೆಗೆ ರಚನೆಯಾದ ಸಿ.ಎ. ನಿವೇಶನಗಳನ್ನು ಯಾರಿಗೆ ಹಂಚಲಾಗಿದೆ; ಉಳಿಕೆ ನಿವೇಶನಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) | ಮಂಡಳಿಯಲ್ಲಿ ಸಿಎ/ಅಮೆನಿಟಿ ನಿವೇಶನಗಳನ್ನು 10 ವರ್ಷಗಳ ಗುತ್ತಿಗೆ ಮತ್ತು ಮಾರಾಟ ಆಧಾರದ ಮೇಲ ಹಂಚಿಕೆ ಮಾಡಲಾಗುತ್ತಿದೆ.<br><br>ಮಂಡಳಿಯು ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲು ವಿಧಿ ವಿಧಾನಗಳನ್ನು ನಿಗಧಿಪಡಿಸಿದ್ದು, ಈ ಕೆಳಕಂಡಂತೆ ಇರುತ್ತದೆ:<br>1. ಸರ್ಕಾರಿ ಅಧಿಸೂಚನೆ ಸಂ:ಸಿಐ 78 ಎಸ್.ಪಿ.ಕ್ಯೂ 2021 ಬೆಂಗಳೂರು, ದಿನಾಂಕ:10-11-2023. (**ಅನುಬಂಧ**-3)<br>2. ಸರ್ಕಾರಿ ಆದೇಶ ಸಂ:ಸಿಐ 78 ಎಸ್.ಪಿ,ಕ್ಯೂ 2021 ಬೆಂಗಳೂರು, ದಿನಾಂಕ:10-11-2023. (**ಅನುಬಂಧ**-4)<br>3. ಸರ್ಕಾರಿ ಆದೇಶ ಸಂ:ಸಿಐ 78 ಎಸ್.ಪಿ.ಕ್ಯೂ 2021 ಬೆಂಗಳೂರು, ದಿನಾಂಕ:05-02-2024. (**ಅನುಬಂಧ**-5)<br>4. ಕೆಐಎಡಿಬಿ ಅಧಿಕೃತ ಜ್ಞಾಪನ ಸಂ:ಕೆಐಎಡಿಬಿ/ಕೇಂ.ಕ /ಸಿ.ನಂ.44705/19357/2023-24 ದಿನಾಂಕ:07-02-2024. (**ಅನುಬಂಧ**-6).<br>5. ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿಎ/ಅಮೆನಿಟಿ ನಿವೇಶನ ಹಂಚಿಕೆಯ ಮಾನದಂಡಗಳನ್ನು **ಅನುಬಂಧ-7** ರಲ್ಲಿ ಒದಗಿಸಲಾಗಿದೆ.<br><br>ಮುಂದುವರೆದು, ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಲು ದಿನಾಂಕ: 05-02-2024 & 07-02-2024 ರ ಅಧಿಸೂಚನೆಗಳನ್ನು (**ಅನುಬಂಧ-8**) ದಿನ ಪತ್ರಿಕೆಗಳಲ್ಲಿ ಪ್ರಕಟಿಸಿ, ಅರ್ಹ ಅರ್ಜಿದಾರರಿಗೆ ದಿನಾಂಕ:05-03-2024 ರಂದು ನಡೆದ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಿರ್ಣಯದನ್ವಯ ಅನುಮೋದಿತ ಅರ್ಜಿಗಳಿಗೆ ಹಂಚಿಕೆ ಮಾಡಲಾಗಿದೆ. ಸದರಿ ಸಭೆಯ ನಿರ್ಣಯದನ್ವಯ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಿರುವ ವಿವರಗಳನ್ನು **ಅನುಬಂಧ-9** ರಲ್ಲಿ ಒದಗಿಸಲಾಗಿದೆ.<br><br>ಮುಂದುವರೆದು, ತಕರಾರು ರಹಿತ ಬಾಕಿ ಇರುವ ಸಿಎ/ಅಮೆನಿಟಿ ನಿವೇಶನಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ-10** ರಲ್ಲಿ ಒದಗಿಸಲಾಗಿದೆ. |
| ಈ) | ತುಮಕೂರು ಜಿಲ್ಲೆ, **ಶಿರಾ** ತಾಲ್ಲೂಕಿನಲ್ಲಿ ಎಷ್ಟು ಕೈಗಾರಿಕಾ **ಪ್ರದೇಶ**ವಿದೆ; ಇದರಲ್ಲಿ ಸ್ಥಳೀಯರಿಗೆ **ಎಷ್ಟು** ನಿವೇಶನ ನೀಡಲಾಗಿದೆ; ಹೊರ ರಾಜ್ಯದವರಿಗೆ ಎಷ್ಟು ನಿವೇಶನ ನೀಡಲಾಗಿದೆ; ಇದರಿಂದ ಸೃಷ್ಟಿಯಾದ ಉದ್ಯೋಗಗಳ ಸಂಖ್ಯೆ ಎಷ್ಟು; (ಇದರಲ್ಲಿ ಹಂಚಿಕೆಯಾದ ಮತ್ತು ಖಾಲಿಯಿರುವ ಸಿ.ಎ ನಿವೇಶನಗಳ ಸಂಪೂರ್ಣ ವಿವರ **ನೀಡು**ವುದು) | ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನಲ್ಲಿ, ಶಿರಾ ಕೈಗಾರಿಕಾ ಪ್ರದೇಶವನ್ನು 844.92 ಎಕರೆ ಜಮೀನಿನಲ್ಲಿ ಅಭಿವೃದ್ಧಿ ಪಡಿಸಿದ್ದು, ಹಂಚಿಕೆಗೆ ಲಭ್ಯವಾದ 366.04 ಎಕರೆ ಜಮೀನಿನ ಪೈಕಿ, ಸ್ಥಳೀಯರಿಗೆ 281 ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ಹೊರ ರಾಜ್ಯದವರಿಗೆ 2 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. |

| | | |
|---|---|---|
| | | ಸದರಿ ಕೈಗಾರಿಕಾ ಪ್ರದೇಶದಲ್ಲಿ, ಸಿಎ/ಅಮೆನಿಟಿ ನಿವೇಶನ ಇನ್ನೂ ಹಂಚಿಕೆಯಾಗಿರುವುದಿಲ್ಲ. ಖಾಲಿ ಇರುವ ಸಿಎ/ಅಮೆನಿಟಿ ನಿವೇಶನಗಳ ವಿವರಗಳನ್ನು **ಅನುಬಂಧ-11** ರಲ್ಲಿ ಒದಗಿಸಲಾಗಿದೆ. |
| ಉ) | ಕೆ.ಐ.ಎ.ಡಿ.ಬಿ ವತಿಯಿಂದ ನಿವೇಶನ ಪಡೆದು ರಾಜ್ಯದಲ್ಲಿ ನಿರ್ಮಾಣವಾದ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡಲಾಗುತ್ತಿದೆಯೇ; ಇಲ್ಲದಿದ್ದಲ್ಲಿ ಸ್ಥಳೀಯರಿಗೆ ಮೀಸಲಾತಿ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಮಂಡಳಿಯು ಹಂಚಿಕೆದಾರರೊಂದಿಗೆ ನೆರವೇರಿಸುತ್ತಿರುವ ಗುತ್ತಿಗೆ ಕರಾರು ಪತ್ರದಲ್ಲಿ ಸರ್ಕಾರದ ಕೈಗಾರಿಕಾ ನೀತಿ ಅನುಸಾರ ಉದ್ಯೋಗಾವಕಾಶ ಕಲ್ಪಿಸಬೇಕೆಂಬ ಷರತ್ತನ್ನು ವಿಧಿಸಲಾಗಿದೆ. ಅಲ್ಲದೇ, ಜಮೀನು ಕಳೆದುಕೊಂಡ ಕುಟುಂಬದ ಕನಿಷ್ಟ ಒಬ್ಬ ಸದಸ್ಯನಿಗೆ ಉದ್ಯೋಗಾವಕಾಶ ಕಲ್ಪಿಸಲು ಷರತ್ತು ವಿಧಿಸಲಾಗುತ್ತಿದೆ. |
| ಊ) | ಕೈಗಾರಿಕಾ ಪ್ರದೇಶಕ್ಕೆ ವಶಪಡಿಸಿಕೊಂಡ ಭೂಮಿಗೆ ಪರಿಹಾರವನ್ನು ಯಾವ ರೀತಿಯಲ್ಲಿ ನಿಗಧಿಪಡಿಸಲಾಗುತ್ತಿದೆ? | ಕೆಐಎಡಿ ಕಾಯ್ದೆ ಕಲಂ 28(4) ರಡಿ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಭೂ ಪರಿಹಾರ ನಿಗಧಿ ಪಡಿಸುವ ಸಲುವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿ / ಮಂಡಳಿಯ ವಿಶೇಷ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರುಗುವ ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಭೂ ಮಾಲೀಕರೊಂದಿಗೆ ಸಮಾಲೋಚಿಸಿ ಪ್ರಸ್ತಾವಿತ ಪ್ರದೇಶದಲ್ಲಿನ ಮಾರ್ಗಸೂಚಿ ದರ ಮತ್ತು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಹಿಂದಿನ 3 ವರ್ಷಗಳ ಮಾರಾಟದ ಅಂಕಿ-ಅಂಶಗಳನ್ನು ಪರಿಗಣಿಸಿ ಶಿಫಾರಸ್ಸು ಮಾಡುವ ದರಕ್ಕೆ ಮಂಡಳಿ ಸಭೆಯ ಅನುಮೋದನೆ ಪಡೆದು ನಿಯಮಾನುಸಾರ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ:ಸಿಐ 496 ಐಎಪಿ 2024**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

**ANNEXURE- 1**

**DISTRICT WISE LANDS DEVELOPED, ALLOTTABLE AND ALLOTTED IN THE INDUSTRIAL AREAS OF KIADB**

| Sl. No. | Name of the District | No. of Indl. Areas | Extent Developed (Acres) | | Allotted | |
|---|---|---|---|---|---|---|
| | | | | Allottable | No. of units | Extent (Acres) |
| 1 | Bagalkot | 3 | 392.62 | 314.83 | 155 | 259.53 |
| 2 | Bengaluru Urban | 16 | 6700.96 | 5557.12 | 3578 | 5557.15 |
| 3 | Bengaluru Rural | 22 | 13158.29 | 8720.81 | 3014 | 7128.53 |
| 4 | Belagavi | 8 | 2555.45 | 1605.09 | 2172 | 947.50 |
| 5 | Bellari | 9 | 2403.00 | 1544.35 | 358.00 | 331.63 |
| | Vijayanagara | 2 | 128.61 | 110.91 | 80.00 | 107.32 |
| 6 | Bidar | 8 | 2257.75 | 1618.36 | 1672 | 1436.72 |
| 7 | Vijayapura | 7 | 2761.86 | 1771.20 | 348 | 542.24 |
| 8 | Chamarajanagar | 2 | 2367.53 | 1441.46 | 197.00 | 569.93 |
| 9 | Chikkaballapur | 6 | 2522.51 | 1682.67 | 589 | 953.61 |
| 10 | Chikmagalur | 3 | 381.42 | 268.98 | 41 | 124.62 |
| 11 | Chitradurga | 3 | 1339.21 | 996.41 | 83 | 75.14 |
| 12 | Dakshina Kannada | 8 | 2566.55 | 1314.64 | 709 | 926.47 |
| 13 | Davangere | 8 | 987.73 | 717.18 | 370 | 292.72 |
| 14 | Dharwad | 16 | 8771.87 | 5241.43 | 1374 | 2785.69 |
| 15 | Gadag | 1 | 162.75 | 124.21 | 142 | 121.21 |
| 16 | Kalaburagi | 6 | 1941.53 | 1333.56 | 983 | 904.38 |
| 17 | Hassan | 10 | 3823.56 | 2372.63 | 546 | 1488.11 |
| 18 | Haveri | 2 | 507.08 | 332.86 | 0.00 | 0.00 |
| 19 | Kodagu | 1 | 250.00 | 188.79 | 126 | 188.79 |
| 20 | Kolar | 11 | 4656.70 | 3094.11 | 881 | 1898.28 |
| 21 | Koppal | 3 | 371.79 | 242.60 | 41 | 31.15 |
| 22 | Mandya | 4 | 562.28 | 447.51 | 288 | 447.51 |
| 23 | Mysuru | 13 | 6573.65 | 4898.06 | 2182 | 4153.12 |
| 24 | Raichur | 6 | 2217.11 | 2025.21 | 439 | 2033.21 |
| 25 | Ramanagar | 8 | 5249.37 | 3853.11 | 1253 | 2733.70 |
| 26 | Shivamogga | 7 | 870.82 | 641.24 | 801 | 553.55 |
| 27 | Tumakuru | 12 | 6638.18 | 4561.44 | 1742 | 3841.99 |
| 28 | Udupi | 4 | 264.84 | 169.10 | 216 | 160.85 |
| 29 | Uttara Kannada | 3 | 112.37 | 71.06 | 40 | 27.63 |
| 30 | Yadgir | 3 | 2977.64 | 2280.21 | 298 | 985.32 |
| | TOTAL | 215 | 86475.03 | 59541.14 | 24718 | 41607.60 |

Secretary-I
Karnataka Industrial Areas Development Board
Bengaluru - 560 001.

JOINT DIRECTOR
Karnataka Industrial Areas Development Board
Head Office, Bengaluru

ANNEXURE-2

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

## ಕಳೆದ ಮೂರು ವರ್ಷಗಳಲ್ಲಿ ಅಭಿವೃದ್ಧಿಪಡಿಸಿ ಹಂಚಿಕೆ ಪ್ರಾರಂಭಿಸಿರುವ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಲಭ್ಯವಿರುವ ಜಮೀನುಗಳ ವಿವರಗಳು

### ಘೋಷ್ವಾರೆ

| ಕ್ರ. ಸಂ. | ಜಿಲ್ಲೆ | ಕೈಗಾರಿಕಾ ಪ್ರದೇಶ | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| 1 | ಬೆಂಗಳೂರು ನಗರ | ಬಂಡಿಕೊಡಿಗೆಹಳ್ಳಿ (ಹೈಟೆಕ್, ಡಿಫೆನ್ಸ್ & ಏರೋಸ್ಪೇಸ್ ಪಾರ್ಕ್ ಫೇಸ್-1 ಹತ್ತಿರ) | 50.60 |
| 2 | ಬೆಂಗಳೂರು ಗ್ರಾಮಾಂತರ | ಸೋಂಪುರ 1 & 2ನೇ ಹಂತ (ಅನೆಕ್ಸ್) | 110.00 |
| | | ಕಂಬಳೀಪುರ | 59.34 |
| 3 | ರಾಮನಗರ | ಹಾರೋಹಳ್ಳಿ 5ನೇ ಹಂತ | 227.65 |
| 4 | ತುಮಕೂರು | ಜಪಾನೀಸ್ ಇಂಡಸ್ಟ್ರಿಯಲ್ ಟೌನ್ ಶಿಪ್ | 50 |
| 5 | ಕೋಲಾರ | ವೇಮಗಲ್ 2ನೇ ಹಂತ | 289 |
| | | ಬಾವನಹಳ್ಳಿ | 461 |
| 6 | ಚಿಕ್ಕಬಳ್ಳಾಪುರ | ಗೌರಿಬಿದನೂರು 3ನೇ ಹಂತ | 530 |
| 7 | ಚಿಕ್ಕಮಗಳೂರು | ನಗಾದಿಯತ್ ಕಾವಲ್ | 60 |
| 8 | ಧಾರವಾಡ | ಕೋಟೂರ್-ಬೇಲೂರು ಇ.ಎಂ.ಸಿ. ಕ್ಲಸ್ಟರ್ | 120 |
| | | ಮಮ್ಮಿಗಟ್ಟಿ 2ನೇ ಹಂತ | 199 |
| 9 | ವಿಜಯಾಪುರ | ಮುಳವಾಡ 2ನೇ ಹಂತ | 349.96 |
| | | ಮುಳವಾಡ 3ನೇ ಹಂತ | 507.96 |
| 10 | ಚಿತ್ರದುರ್ಗ | ಮೇಟಿಕುರ್ಕೆ | 764.63 |
| | | ಉಳ್ಳಾವರ್ತಿ ಕಾವಲ್ | 59.19 |
| 11 | ದಾವಣಗೆರೆ | ಸಾರಥಿ ಕುರುಬರಹಳ್ಳಿ 2ನೇ ಹಂತ | 200 |
| 12 | ಕಲಬುರ್ಗಿ | ಕಪನೂರ್ 3ನೇ ಹಂತ | 65 |
| 13 | ಯಾದಗಿರಿ | ಕಡೆಚೂರ್ 2ನೇ ಹಂತ | 763 |
| 14 | ಬಳ್ಳಾರಿ | ಕುಡುತಿನಿ 1ನೇ ಹಂತ | 262 |
| 15 | ಕೊಪ್ಪಳ | ಕ್ಯಾದಿಗುಪ್ಪ ಸಾಮಾನ್ಯ ಕೈಗಾರಿಕಾ ಪ್ರದೇಶ | 84 |
| | | ಕ್ಯಾದಿಗುಪ್ಪ ಗ್ರಾನೈಟ್ ಕ್ಲಸ್ಟರ್ | 65 |
| | | **ಒಟ್ಟು** | **5277.23** |

ಕಾರ್ಯದರ್ಶಿ–1
ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
ಕೇಂದ್ರ ಕಛೇರಿ, ಬೆಂಗಳೂರು.

ಜಂಟಿ ನಿರ್ದೇಶಕರು, ಕೆ.ಐ.ಎ.ಡಿ.ಬಿ.

ಬೆಂಗಳೂರು-560001.

**ANNEXURE- 3**

No. CI 78 SPQ 2021

Commerce & Industries Department,
Karnataka Government Secretariat,
Vikasa Soudha, Bengaluru - 560001.
Date: 10.11.2023

## NOTIFICATION

In exercise of the powers conferred by sub-section (1) of Section 2 of the Karnataka Industrial Areas Development Act (Karnataka Act 18 of 1966), the Government of Karnataka hereby specified the following as amenities for the purpose of the said Act:

1) R&D Centers;
2) Innovation-Centre of Excellence;
3) Technical Institutes, Skill Development/Training Institutes, Educational Institutions;
4) Government/PSU Offices;
5) Banks;
6) Hospitals/Dispensaries;
7) Hotels;
8) ICD;
9) Air Cargo Complex;
10) Weigh Bridges;
11) Petrol/Gas Station;
12) Canteens;
13) Housing Tenements/Apartments/Dormitories for the employees of industries.

Notification issued vide No. CI 86 SPQ 90, dated 13.03.1991 is withdrawn with immediate effect.

They shall come into force from the date of their publication in the Official Gazette.

By order and in the name of
the Governor of Karnataka,

10/11/2023
(BHIMAPPA P. AJOOR)
Under Secretary to Government
Commerce & Industries Dept.(ID)

To:

1. The Compiler, Karnataka Rajyapatra, Bangalore to publish in the next issue, requested to furnish 100 copies of the published to the Under Secretary to Government,(Industrial Development)Department of Commerce and Industries.
2. Principal Accountant General (GA&SSA)/(E&RSA), Karnataka, New Building, Audit Bhavan, Bengaluru.

...2)

ANNEXURE- 4

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ./ಅಮೆನಿಟಿ ನಿವೇಶನ ಗಳನ್ನು ಹಂಚಿಕೆ ಮಾಡುವಲ್ಲಿ ಅನುಸರಿಸಬೇಕಾದ ವಿಧಿ-ವಿಧಾನಗಳ ಬಗ್ಗೆ.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ ಸಿಐ 180 ಎಸ್‌ಪಿಕ್ಯು 2017, ದಿನಾಂಕ 08.03.2019.
2) ದಿನಾಂಕ 13.10.2023ರಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

*****

**ಪ್ರಸ್ತಾವನೆ:**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ./ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡುವಾಗ ಅನುಸರಿಸಬೇಕಾದ ವಿಧಿ-ವಿಧಾನಗಳನ್ನು ನಿಗಧಿಪಡಿಸಿ ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.

ಹಾಲಿ ಕೆ.ಐ.ಎ.ಡಿ.ಬಿ.ಯಲ್ಲಿ ಸಿ.ಎ. ನಿವೇಶನಗಳ ಹಂಚಿಕೆಯ ಸಂಪೂರ್ಣ ಮೊತ್ತವನ್ನು upfront ಪಾವತಿಸಿಕೊಳ್ಳುತ್ತಿದ್ದರೂ ಸಹ ಹಂಚಿಕೆದಾರರಿಗೆ 99 ವರ್ಷಗಳ ಲೀಸ್ ಆಧಾರದ ಮೇಲೆ ನೀಡಲಾಗುತ್ತಿದೆ. ಆದರೆ, ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸಿ.ಎ. ನಿವೇಶನಕ್ಕೆ ಹಂಚಿಕೆಯ ಶೇ. 10ರಷ್ಟು ಮೊತ್ತವನ್ನು ಮಾತ್ರ ಪಡೆದು, 30 ವರ್ಷಗಳ ಲೀಸ್ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತಿದೆ.

ಮೇಲೆ ಓದಲಾದ (2)ರ ಪರಿಶೀಲನಾ ಸಭೆಯಲ್ಲಿ ಪ್ರಸ್ತುತ ಇರುವ ಕೆ.ಐ.ಎ.ಡಿ.ಬಿ.ಯ ಸಿ.ಎ. ನಿವೇಶನಗಳ ಹಂಚಿಕೆಗಳ ಮಾರ್ಗಸೂಚಿಗಳನ್ನು ಬದಲಾಯಿಸುವುದು ಅವಶ್ಯಕವಿದೆ ಎಂದು ಅಭಿಪ್ರಾಯಪಡಲಾಗಿದ್ದು, ಅದರಂತೆ, ಸಿ.ಎ. ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಪರಿಷ್ಕೃತ ಮಾರ್ಗಸೂಚಿಗಳನ್ನು ಸರ್ಕಾರದಿಂದ ಹೊರಡಿಸಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಆದುದರಿಂದ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ

## ಸರ್ಕಾರದ ಆದೇಶ ಸಂಖ್ಯೆ ಸಿಐ 78 ಎಸ್‌ಪಿಕ್ಯು 2021, ಬೆಂಗಳೂರು, ದಿನಾಂಕ 10.11.2023

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಸಿ.ಎ./ ಅಮೆನಿಟಿ ನಿವೇಶನಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ವಿಧಿ-ವಿಧಾನಗಳನ್ವಯ ಹಂಚಿಕೆ ಮಾಡಲು ಆದೇಶಿಸಲಾಗಿದೆ:

1) ಸಿ.ಇ.ಒ.&ಇ.ಎಂ., ಕೆ.ಐ.ಎ.ಡಿ.ಬಿ.ರವರು ಲಭ್ಯವಿರುವ ಸಿ.ಎ./ಅಮೆನಿಟಿ ನಿವೇಶನಗಳಲ್ಲಿ ಕೈಗಾರಿಕಾ ಪ್ರದೇಶಗಳಿಗೆ ಒದಗಿಸಬೇಕಾದ ಚಟುವಟಿಕೆಗಳು/ ಸೌಕರ್ಯಗಳನ್ನು ಅಧಿಸೂಚನೆ ಸಂಖ್ಯೆ ಸಿಐ 78 ಎಸ್‌ಪಿಕ್ಯು 2021, ದಿನಾಂಕ: 10.11.2023 ರನ್ವಯ ಮೀಸಲಿಡಬೇಕು.

2) ಸಿ.ಎ./ಅಮೆನಿಟಿ ನಿವೇಶನಗಳ ಹಂಚಿಕೆಗೆ ಕನ್ನಡ ಹಾಗೂ ಆಂಗ್ಲ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಬೇಕು. ಜಾಹೀರಾತಿನಲ್ಲಿ ಸಿ.ಎ./ಅಮೆನಿಟಿ ನಿವೇಶನಗಳ ಸ್ಥಳ, ಉದ್ದೇಶ ಮತ್ತು ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಹಂಚಿಕೆಗೆ ಅಗತ್ಯವೆಂದು ಪರಿಗಣಿಸಬಹುದಾದ ಇತರೆ ಮಾನದಂಡಗಳ ವಿವರಗಳನ್ನು ಪ್ರಚಾರಪಡಿಸಬೇಕು. ಹಂಚಿಕೆಗೆ ಇರುವ ಮಾನದಂಡಗಳನ್ನು ಸಿ.ಇ.ಒ.&ಇ.ಎಂ., ಕೆ.ಐ.ಎ.ಡಿ.ಬಿ.ಯವರು ನಿಗಧಿಪಡಿಸಬೇಕು.

3) ಸ್ವೀಕರಿಸಿದ ಅರ್ಜಿಗಳನ್ನು ಸಿ.ಇ.ಒ.&ಇ.ಎಂ., ಕೆ.ಐ.ಎ.ಡಿ.ಬಿ. ರವರ ಅಧ್ಯಕ್ಷತೆಯಲ್ಲಿ ಮಂಡಳಿಯ ಅಧಿಕಾರಿಗಳೊಂದಿಗೆ ಉಪ ಸಮಿತಿಯನ್ನು ರಚಿಸಿ, ಜಾಹೀರಾತಿನಲ್ಲಿ ನೀಡಿರುವ ಮಾನದಂಡಗಳಂತೆ ಅರ್ಜಿಗಳನ್ನು ಪರಿಶೀಲಿಸುವುದು.

4) ಪರಿಶೀಲಿಸಿದ ಅರ್ಜಿಗಳನ್ನು SLSWCC ಸಭೆಯ ಮುಂದೆ ಚರ್ಚೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸುವುದು.

5) SLSWCC ಸಭೆಯಲ್ಲಿ ಸಿ.ಎ./ಅಮೆನಿಟಿ ನಿವೇಶನಗಳಲ್ಲಿ ಸ್ಥಾಪಿಸುವ ಯೋಜನೆಯ ಅನುಮೋದನೆ ಪಡೆದವರಿಗೆ ಕೆಐಎಡಿಬಿ ವತಿಯಿಂದ 10 ವರ್ಷಗಳ ಕಾಲ ಲೀಸ್ ಕಂ ಸೇಲ್ ಆಧಾರದಲ್ಲಿ ನಿವೇಶನವನ್ನು ಹಂಚಿಕೆ ಮಾಡುವುದು.

6) ಸಿ.ಎ./ಅಮೆನಿಟಿ ನಿವೇಶನಗಳಿಗೆ ಸರ್ಕಾರದ ಆದೇಶ ಸಂಖ್ಯೆ ಸಿಐ 132 ಎಸ್‌ಪಿಕ್ಯು (ಇ) 2021, ದಿನಾಂಕ 01.01.2022ರನ್ವಯ ಶುದ್ಧ ಕ್ರಯ ಪತ್ರಗಳನ್ನು ನೆರವೇರಿಸುವುದು.

7) ಪ್ರಸ್ತಾವಿತ ಮೇಲಿನ ನೀತಿಯು KIADB ಯ ಅಸ್ತಿತ್ವದಲ್ಲಿರುವ ಸಿ.ಎ./ಅಮೆನಿಟಿ ನಿವೇಶನಗಳ ಗುತ್ತಿಗೆಗಳಿಗೂ ಅನ್ವಯಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ ಸಿಐ 180 ಎಸ್‌ಪಿಕ್ಯು 2017, ದಿನಾಂಕ 08.03.2019ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಭೀಮಪ್ಪ ಪ. ಅಜೂರ್) 29/11/2023
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ.)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿಸಿದ 100 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ(ಕೈ.ಅ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರಿಗೆ ಒದಗಿಸಲು ಕೋರಿದೆ.

ANNEXURE- 5

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ. ನಿವೇಶನಗಳ ಹಂಚಿಕೆಯಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಮೀಸಲಾತಿಯನ್ನು ನಿಗಧಿ ಪಡಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ ಸಿಐ 78 ಎಸ್‌ಪಿಕ್ಯೂ 2021, ದಿನಾಂಕ:10.11.2023.
2. ಸಿಇಓ ಮತ್ತು ಇಎಂ, ಕೆಐಎಡಿಬಿ, ರವರ ಪತ್ರ ಸಂಖ್ಯೆ:KIADB/SCP-TSP/17972/2023-24, ದಿನಾಂಕ:16.01.2024.

*****

**ಪ್ರಸ್ತಾವನೆ:**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡುವಾಗ ಅನುಸರಿಸಬೇಕಾದ ವಿಧಿ-ವಿಧಾನಗಳನ್ನು ನಿಗಧಿಪಡಿಸಿ ಮೇಲೆ ಓದಲಾದ ಕ್ರಮಾಂಕ (1)ರ ಆದೇಶದಲ್ಲಿ ಹೊರಡಿಸಲಾಗಿರುತ್ತದೆ.

ಸಿಇಒ & ಇಎಂ, ಕೆಐಎಡಿಬಿ ರವರು ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿನ ಸಿ.ಎ. ನಿವೇಶನಗಳ ಹಂಚಿಕೆಯಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಮೀಸಲಾತಿಯನ್ನು ನಿಗಧಿ ಪಡಿಸುವ ಸಂಬಂಧ ಕೆಳಕಂಡಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಾಗರೀಕ ಸೌಕರ್ಯ ಸೈಟುಗಳ ಹಂಚಿಕೆ) ನಿಯಮಗಳು, 1989 ರಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಸಂಸ್ಥೆಗಳಿಗೆ ನಾಗರೀಕ ಸೌಕರ್ಯ ಸೈಟುಗಳ ಹಂಚಿಕೆಯಲ್ಲಿ ಮೀಸಲಾತಿಯನ್ನು ಒದಗಿಸಿರುತ್ತದೆ.
- ಪ್ರಸ್ತುತ, ಮಂಡಳಿಯು ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಉದ್ಯಮಿಗಳಿಗೆ ಕೈಗಾರಿಕಾ ನಿವೇಶನಗಳ ಒಟ್ಟು ಹಂಚಿಕೆ ಪ್ರದೇಶದ ಶೇ. 24.10 ಅನ್ನು ಕಾಯ್ದಿರಿಸಲಾಗುತ್ತಿದೆ.
- ದಿನಾಂಕ: 26.12.2023 ರಂದು ನಡೆದ ಮಂಡಳಿ ಸಭೆಯಲ್ಲಿ ಕೆಐಎಡಿಬಿಯ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗಾಗಿ ಲಭ್ಯವಿರುವ ಒಟ್ಟು ಸಿ.ಎ. ನಿವೇಶನಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಶೇ. 24.10 ಅನ್ನು ಮೀಸಲಾತಿಯನ್ನು ಒದಗಿಸಲು ಪರಿಗಣಿಸಿ, ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಸಿಐ 78 ಎಸ್‌ಪಿಕ್ಯೂ 2021, ಬೆಂಗಳೂರು, ದಿನಾಂಕ:05.02.2024**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗಾಗಿ ಲಭ್ಯವಿರುವ ಒಟ್ಟು ಸಿ.ಎ. ನಿವೇಶನಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಶೇ. 24.10 ರಷ್ಟು ಮೀಸಲಾತಿಯನ್ನು ನಿಗಧಿಪಡಿಸಿ ಆದೇಶಿಸಿದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ ಸಿಐ 78 ಎಸ್‌ಪಿಕ್ಯೂ 2021, ದಿನಾಂಕ:10.11.2023ರ ಆದೇಶದಲ್ಲಿನ ವಿಧಿ-ವಿಧಾನಗಳನ್ವಯ ಹಂಚಿಕೆ ಮಾಡಲು ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ

05/02/2024

**(ಭೀಮಪ್ಪ ಪ. ಅಜೂರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಕೈ.ಅ.).

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿಸಿದ 100 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ(ಕೈ.ಅ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರಿಗೆ ಒದಗಿಸಲು ಕೋರಿದೆ.

**ಇವರಿಗೆ:**

1. ಪ್ರಧಾನ ಮಹಾಲೆಖಪಾಲರು (ಜಿ&ಎಸ್‌ಎಸ್‌ಎ/ಇ&ಆರ್‌ಎಸ್‌ಎ), ಕರ್ನಾಟಕ ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೆಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001
3. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು.
4. ಸಿ.ಇ.ಒ.&ಇ.ಎಂ., ಕೆ.ಐ.ಎ.ಡಿ.ಬಿ., ಖನಿಜಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು,
7. ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

ANNEXURE- 6

# KARNATAKA INDUSTRIAL AREAS DEVELOPMENT BOARD

(A Government of Karnataka Undertaking)

# 49, 4th & 5th Floors, 'East Wing', Khanija Bhavan, Race Course Road, Bengaluru-560 001. Ph. : 080 22265383 Fax : 080-22267901

Website : www.kiadb.in email : ceoem@kiadb.in

No.KIADB/HO/Allot/C.NO.44705/ 19357 /2023-24 Date: 07-02-2024

**OFFICIAL MEMORANDUM**

Sub: Criteria for selection of applicants for allotment of CA/Amenity plots in industrial areas of the Board.

Ref:
1. Govt Order No.CI 132 SPQ (e) 2021, Bengaluru dtd.01-01-2022.
2. Notification No.CI 78 SPQ 2021 dtd. 10-11-2023.
3. Govt. Order No.CI 78 SPQ 2021, Bengaluru dtd.10-11-2023.

******

The Government in C & I Department has issued notification No.CI 78 SPQ 2021, dated:10-11-2023 by specifying certain activities as amenities in the industrial areas developed by the Board by withdrawing the earlier notification No.CI 86 SPQ 90 dated 13-03-1991.

Further, the Government in C&I Department vide G.O.No: CI 78 SPQ 2021, Dated:10-11-2023 has laid out the following procedure for allotment of CA/Amenity plots formed in the Industrial Areas developed by the Board :

1. To reserve the activities specified in the Notification No.CI 78 SPQ 2021 dtd.10-11-2023 as amenities in the available amenity plots of the industrial areas of the Board.
2. To give advertisement for allotment of CA/amenity plots in English & Kannada daily news papers by indicating the location activity, last date of application & guidelines for allotment of such plots. CEO & EM, KIADB to determine the criteria for allotment of CA/amenity plots.
3. To constitute a Sub Committee under the chairmanship of CEO & EM, KIADB and other Officers of KIADB for scrutinizing the applications submitted as per the advertisement made.
4. To place the scrutinized applications of the Sub Committee before the SLSWCC for discussion and approval.
5. To allot CA/Amenity plots on 10 years lease cum sale basis in favour of applicants whose projects are approved by the SLSWCC.
6. To execute absolute sale deed in respect of CA/Amenity plots as per the Govt Order No.CI 132 SPQ (E) 2021 dtd.01-01-2022.
7. The above policy are applicable even for already allotted CA/Amenity plots which are under lease by KIADB.

--2

Pursuant to the abovesaid Govt. Order dated 10-11-2023, notification has to be issued inviting applications for available CA/ amenity plots proposed for allotment in the industrial areas of the Board. Subsequent to the notification and as per the terms and conditions indicated, the applicant should file the application for their project along with necessary documents indicated therein by remitting a sum of Rs. 2,000/- towards application fee through RTGS to KIADB, Bengaluru.

The criteria for selection of applicants for allotment of CA/ Amenity plots are as below:-

a) Details of the capacity of the institution/company/firm/concern to provide the type of civic amenity for which plot is offered ( a brief write up on their letterhead to be enclosed by the applicant )
b) The length of existence of the institution and its registration under relevant act;
c) The financial status of institution/ company/firm/concern;
d) The present location of the institution/company/firm/concern;
e) The benefit likely to accrue to the industrialists of that area by allotment of the civic amenity site;
f) The bonafide and genuineness of the institution as made out in the annual reports, audit report etc.
g) Extent of land required for the proposed project proportionate to the investment.
h) Educational Qualification and experience of the applicant.

The formats of prescribed application form, allotment letter and lease cum sale agreement are attached to this Official Memorandum.

Chief Executive Officer
& Executive Member

To

1. Chief Engineer-1, KIADB HO, Bengaluru
2. Chief Engineer-2, KIADB HO, Bengaluru
3. The Joint Director, KIADB HO, Bengaluru
4. The Secretary -1, KIADB HO, Bengaluru
5. The Secretary -2, KIADB HO, Bengaluru
6. The COF, KIADB HO, Bengaluru
7. All the Executive Engineers, KIADB Zonal Offices.

Encl: as above.

ANNEXURE- 7

# KARNATAKA INDUSTRIAL AREAS DEVELOPMENT BOARD

## Procedure for allotment of Civic Amenity/Amenity Plots

- The Government in C & I Department has issued notification No.CI 78 SPQ 2021, dated:10-11-2023 by specifying certain activities as amenities in the industrial areas developed by the Board by withdrawing the earlier notification No.CI 86 SPQ 90 dated 13-03-1991. The specified activities are as below:

  "R&D Centers; Innovation-Centre of Excellence; Technical Institutes, Skill Development/Training Institutes, Educational Institutions; Government/ PSU Offices; Banks, Hospitals/Dispensaries; Hotels; ICD; Air Cargo Complex; Weigh Bridges; Petrol/Gas Station; Canteens; Housing Tenements/Apartments/Dormitories for the employees of industries".

- Further, the Government in C&I Department vide G.O.No: CI 78 SPQ 2021, Dated:10-11-2023 has laid out certain procedure for allotment of CA/Amenity plots formed in the Industrial Areas developed by the Board and to allot CA/Amenity plots on 10 years lease cum sale basis.

- Advertisement of Notification for allotment of CA/Amenity plots formed in the Industrial Areas to be issued inviting applications for allotment of land.

- Applications to be submitted by the applicants to KIADB in the prescribed application form manually along with necessary documents indicated therein, by remitting a sum of Rs.2,000/- towards application fee.

- The Sub Committee under the chairmanship of CEO & EM, KIADB and other Officers of KIADB shall scrutinize the applications submitted as per the notification issued and as per the criteria fixed for allotment of CA/Amenity plots.

- The Sub Committee to place the scrutinized applications before the SLSWCC for discussion and approval.

- After issue of approval letters by the SLSWCC to the successful applicants, demand notices for payment of 30% initial deposit on the tentative cost of land within 30 days to the General Category entrepreneurs and 10% initial deposit tentative cost of land within 30 days to the SC/ST entrepreneurs shall be issued.

- After receipt of 10%/30% of initial deposit by the applicants, allotment letters be issued by indicating balance tentative cost of land (SC/ST entrepreneurs to pay balance 90% within 180 days and General Category entrepreneurs to pay balance 70% within 90 days).

- After receipt of 100% tentative cost of land, Confirmatory Letter of Allotment of Land shall be issued & then Possession Certificate shall be issued to the successful applicant within 30 days.

- Lease cum Sale Agreement will be executed for 10 years, within 30 days from the date of issuance of Possession Certificate.

- Absolute Sale deed shall be executed as per the G.O. No. CI 132 SPQ (E) 2021, dated 01.01.2022, during the currency of lease period or at the end of the lease period subject to fulfillment of terms and conditions of Lease cum Sale Agreement.

2051/83 24 x 6

**ANNEXURE-8**

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

**(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)**

ನಂ.49, 4 ಮತ್ತು 5ನೇ ಮಹಡಿ, 'ಈಸ್ಟ್‌ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001

ದೂರವಾಣಿ ಸಂ: 080-22265383 ವೆಬ್‌ಸೈಟ್: www.kiadb.in ಇಮೇಲ್: ceoemkiadb@gmail.com

ಸಂ: ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ:44705/19145 /2023-24 ದಿನಾಂಕ: 05.02.2024

## ಅಧಿಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕ.ಕೈ.ಪ್ರ.ಅ.ಮಂ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ 1966 ರಡಿಯಲ್ಲಿ ಸಂಯೋಜಿತವಾದ ಒಂದು ಶಾಸನಬದ್ಧ ಸಂಸ್ಥೆಯಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ವೃದ್ಧಿಗಾಗಿ ಎಲ್ಲಾ ಮೂಲಸೌಕರ್ಯಗಳೊಂದಿಗೆ ಕ್ರಮಬದ್ಧವಾಗಿ ನಿರ್ಮಾಣ ಮಾಡುವ ಧ್ಯೇಯೋದ್ದೇಶ ಹೊಂದಿದೆ. ಮಂಡಳಿಯು ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕೋದ್ಯಮಿಗಳ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಸಿಎ/ಅಮೆನಿಟಿ ನಿವೇಶನಗಳನ್ನು ರಚಿಸುವ ಬಗ್ಗೆ ಕೆಐಎಡಿ ಕಾಯ್ದೆ 1966 ರ ಸೆಕ್ಷನ್ 14 (ಸಿ) ರಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 78 ಎಸ್‌ಪಿಕ್ಯೂ 2021 ಬೆಂಗಳೂರು ದಿನಾಂಕ: 10.11.2023 ರಲ್ಲಿ ಈ ಹಿಂದಿನ ಸರ್ಕಾರಿ ಅಧಿಸೂಚನೆ ಸಂ:ಸಿಐ 86 ಎಸ್‌ಪಿಕ್ಯೂ 90 ಬೆಂಗಳೂರು ದಿನಾಂಕ: 13.03.1991 ನ್ನು ಹಿಂಪಡೆದು ಕೆಲವು ಚಟುವಟಿಕೆಗಳನ್ನು ಅಮೆನಿಟಿ ಎಂದು ನಿಗದಿಪಡಿಸಿರುತ್ತದೆ. (ಮಂಡಳಿಯ ವೆಬ್‌ಸೈಟ್ www.kiadb.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ).

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿಐ 78 ಎಸ್‌ಪಿಕ್ಯೂ 2021 ದಿ:10.11.2023 ರಲ್ಲಿ ಮಂಡಳಿಯ ಕೈಗಾರಿಕಾ ಪ್ರದೇಶದಲ್ಲಿನ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲು ಕಾರ್ಯವಿಧಾನಗಳನ್ನು ರಚಿಸಿ 10 ವರ್ಷಗಳ ಗುತ್ತಿಗೆ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಆಧಾರದಲ್ಲಿ ಹಂಚಿಕೆ ಮಾಡಲು ಆದೇಶಿಸಲಾಗಿದೆ. (ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ).

ಮಂಡಳಿಯು ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿನ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ ಖಾಸಗಿ ಉದ್ಯಮ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ಉದ್ದಿಮೆದಾರರಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

ಮಂಡಳಿಯ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗೆ ಪ್ರಸ್ತಾಪಿಸಿರುವ ಸಿಎ/ಅಮೆನಿಟಿ ನಿವೇಶನಗಳ ಪಟ್ಟಿಯನ್ನು ದಿನಾಂಕ: **08.02.2024** ರಂದ ಸಂಬಂಧಿಸಿದ ಎಲ್ಲಾ ಮಾಹಿತಿಯೊಂದಿಗೆ ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ಪ್ರಕಟಿಸಲಾಗುತ್ತದೆ. ಅರ್ಜಿದಾರರು ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಎಲ್ಲಾ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು ಹಾಗೂ ರೂ.2,000/-ಗಳ ಅರ್ಜಿ ಶುಲ್ಕವನ್ನು RTGS ಮುಖಾಂತರ ಪಾವತಿಸುವುದು.

ನಿಗದಿತ ಅರ್ಜಿ ನಮೂನೆ ಮತ್ತು RTGS ವಿವರಗಳನ್ನು ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ದಿನಾಂಕ: **08.02.2024** ರಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

| District | Industrial Area |
|---|---|
| Bengaluru Rural | Sompura 1st & 2nd Stage |
| | Avverahalli |
| | Obadenahalli, Doddaballapura 3rd Phase |
| | Hitech, Defence and Aerospce Park, (Aerospace Sector) |
| | Hitech, Defence and Aerospce Park, (Aerospace SEZ) |
| Bengaluru Urban | Jigani 2nd Phase |
| | Hitech, Defence and Aerospce Park, (IT Sector) |
| | Hitech, Defence and Aerospce Park, (Hardware Sector) |
| Ramanagara | Bidadi phase-2, Sector-1 |
| | Bidadi phase-2, Sector-2 |
| | Harohalli 3rd Phase |
| | Harohalli 3rd Phase (Women Enter. Park) |
| Chikkaballapura | Gowribidnur 1st Phase |
| | Gowribidnur 2nd Phase |
| | Mastenahalli 1st Phase |
| Kolar | Vemgal |
| | Narasapura |
| | Malur 4th Phase |
| Tumakuru | Antharasanahalli 2nd Phase |
| | Vasanthanarasapura 1st Phase |
| | Vasanthanarasapura 1st Phase (Annexe) |
| | Vasanthanarasapura 2nd Phase |
| | Vasanthanarasapura 3rd Phase |
| | Vasanthanarasapura 3rd Phase (Residential Layout) |
| | Sira |
| | TMTP |
| Belagavi | Kanagala |
| Vijayapura | Mahalbhagayt |
| | Mulawad |
| Raichur | Manvi |
| | Yermaras |
| Davanagere | SarathiKurubarahalli 1st Stage |
| Dakshina Kannada | Baikampadi |
| | EPIP 1st Stage |
| Udupi | Nandikur |
| | Belapu |
| | Miyaru |
| Hassan | Hassan Growth Centre |
| | Thimmanahalli |
| Chikkamagaluru | Amble |
| Chamarajanagar | Badanaguppe & Kellamballi |
| Mandya | Hebbal 2nd Phase |
| Mysuru | Kadakola |
| | Adakanahalli |
| | Thandya 2nd Phase Women's Park Phase-1 |
| | Thandya 2nd Phase |
| Dharwad | Gamanagatti 1st Stage |
| | Mummigatti |
| | Kelageri SC/ST Cluster |
| | Rayapur |
| | KoturBelur |
| Gadag | Narasapur |
| Kalaburagi | Kapnoor 3rd Stage |
| | NanurKesaratagi |
| | Womens Park |
| Yadgir | Kadechur |

ಮುಂದುವರೆದು, ಸಿಎ/ಅಮೆನಿಟಿ ನಿವೇಶನಗಳ ಹಂಚಿಕೆ ಕಾರ್ಯವಿಧಾನಗಳಲ್ಲಿ ದಿನಾಂಕ: 10-11-2023ರ ಸರ್ಕಾರಿ ಆದೇಶದನ್ವಯ ಮಾರ್ಪಾಡುಗಳನ್ನು ಮಾಡಿರುವ ಹಿನ್ನೆಲೆಯಲ್ಲಿ ಈ ಹಿಂದೆ ಹೊರಡಿಸಲಾದ ಈ ಕೆಳಕಂಡ ಅಧಿಸೂಚನೆಗಳನ್ನು ರದ್ದುಪಡಿಸಲಾಗಿರುತ್ತದೆ ಮತ್ತು ಸದರಿ ಅಧಿಸೂಚನೆಗಳಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರು ಹೊಸದಾಗಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ. ಅಲ್ಲದೆ, ಸದರಿ ಅಧಿಸೂಚನೆಗಳಲ್ಲಿ ತಿಳಿಸಲಾದ ಸಿಎ/ಅಮೆನಿಟಿ ನಿವೇಶನಗಳಿಗೆ ಈಗಾಗಲೇ ಹಂಚಿಕೆಯಾಗಿದ್ದರೆ ಅವುಗಳನ್ನು ರದ್ದತಿಯಿಂದ ಹೊರಪಡಿಸಲಾಗಿರುತ್ತದೆ.

1. ಧಾರವಾಡ, ಗದಗ, ಕಲಬುರ್ಗಿ, ಯಾದಗಿರಿ ಹಾಗೂ ರಾಯಚೂರ್ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳಲ್ಲಿನ ಸಿಎ/ಅಮೆನಿಟಿ ನಿವೇಶನಗಳ ಅಧಿಸೂಚನೆ ಸಂ:ಕೆಐಎಡಿಬಿ/ಕೇಂ.ಕ/ ಹಂಚಿಕೆ/ ಸಿ.ಸಂ.35940/17382/2021-22 ದಿನಾಂಕ: 22-03-2022.
2. ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳಲ್ಲಿನ ಸಿಎ/ಅಮೆನಿಟಿ ನಿವೇಶನಗಳ ಅಧಿಸೂಚನೆ ಸಂ:ಕೆಐಎಡಿಬಿ/ಕೇಂ.ಕ/ಹಂಚಿಕೆ/ಸಿ.ಸಂ.35940/17381/2021-22 ದಿನಾಂಕ: 22-03-2022 ಮತ್ತು ಅಧಿಸೂಚನೆ ಸಂ:ಕೆಐಎಡಿಬಿ/ಕೇಂ.ಕ/ಹಂಚಿಕೆ/ಸಿ.ಸಂ.35940/952/2022-23 ದಿನಾಂಕ: 21-04-2022.

ಅರ್ಜಿದಾರರು ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ವೆಬ್‌ಸೈಟ್‌ನಲ್ಲಿ ಇರುವ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ವಲಯ ಕಛೇರಿ ರವರುಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

ಮಂಡಳಿಯು ಯಾವುದೇ ನಿವೇಶನ ಅಥವಾ ಕೈಗಾರಿಕಾ ಪ್ರದೇಶದ ಅಧಿಸೂಚನೆಯನ್ನು ಹಿಂಪಡೆಯಲು ಅಧಿಕಾರ ಹೊಂದಿರುತ್ತದೆ ಹಾಗೂ ಈ ನಿಟ್ಟಿನಲ್ಲಿ ಮಂಡಳಿಯ ನಿರ್ಣಯ ಅಂತಿಮವಾಗಿರುತ್ತದೆ. ಮತ್ತು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **23.02.2024.** ಅರ್ಜಿ ಶುಲ್ಕ ಸಲ್ಲಿಸದ ಹಾಗೂ ಇತರೆ ಅಪೂರ್ಣಗೊಂಡ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕು ಮಂಡಳಿಗಿರುತ್ತದೆ. ನಿವೇಶನ ಹಂಚಿಕೆಯ ವಿಷಯದಲ್ಲಿ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ ಹಾಗೂ ಇದಕ್ಕೆ ಎಲ್ಲಾ ಅರ್ಜಿದಾರರು ಬದ್ಧರಾಗಿರಬೇಕಾಗಿರುತ್ತದೆ.

ಸಹಿ/-

**ದಿನಾಂಕ: 05.02.2024**
**ಸ್ಥಳ: ಬೆಂಗಳೂರು**

**ಮುಖ್ಯ ಕಾರ್ಯನಿರ್ವಹಣಾಧಿಕಾರಿ**
**ಮತ್ತು ಕಾರ್ಯನಿರ್ವಾಹಕ ಸದಸ್ಯರು**

2076/83 13 x 2

# KARNATAKA INDUSTRIAL AREAS DEVELOPMENT BOARD

**(A Government of Karnataka Undertaking)**

#49, 4th & 5th Floors, 'East Wing', Khanija Bhavan, Race Course Road, Bengaluru-560001. Phone :080-22265383

Website: **www.kiadb.in** email: **ceoemkiadb@gmail.com**

No.: KIADB/HO/Allot/C.No.44705/19328 /2023-24 Date: 07.02.2024

## NOTIFICATION

**INVITING APPLICATIONS FOR ALLOTMENT OF AMENITY PLOTS IN THE INDUSTRIAL AREAS DEVELOPED BY THE BOARD**

A notification was issued inviting applications from Private Undertakings, Scheduled Caste/Scheduled Tribes and General category entrepreneurs for allotment of amenity plots in the various industrial areas developed by Karnataka Industrial Areas Development Board vide No.KIADB/HO/Allot/C.No.44705/19145/2023-24 dtd.05.02.2024. by fixing the last date for submission of application on or before 23.02.2024 and to be uploaded in the KIADB website **(www.kiadb.in) on 08.02.2024** along with all the related information.

In furtherance to the above said Notification Dated:05.02.2024, the Government vide C & I Department G.O.No: CI 78 SPQ 2021 Dated: 05.02.2024 (Visit **www.kiadb.in** for downloading the same) has issued order for reservation of 24.10% of available CA/Amenity plots in the KIADB Industrial Areas in favour of Schedule Caste and Schedule Tribe category entrepreneurs. As per the above said Government Order dated 05.02.2024 the details of CA/Amenity plots proposed for allotment to be published in the KIADB website on 08.02.2024 will include reservation of 24.10% in favour of Schedule Caste and Schedule Tribe category entrepreneurs.

All other terms and conditions indicated in original notification No.KIADB/HO/Allot/C.No.44705/19145/2023-24 dtd. 05.02.2024 will be applicable.

**Place: Bengaluru** **Sd/- Chief Executive Officer**
**Date: 07.02.2024** **& Executive Member**

2076/83 14 x 2

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

**(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)**

ನಂ.49, 4 ಮತ್ತು 5ನೇ ಮಹಡಿ, 'ಈಸ್ಟ್‌ವಿಂಗ್', ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001. ದೂ.ಸಂ: 080-22265383

ವೆಬ್‌ಸೈಟ್: **www.kiadb.in** ಇಮೇಲ್: **ceoemkiadb@gmail.com**

ಸಂ: ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ:44705/19328 /2023-24 ದಿನಾಂಕ: 07.02.2024

## ಅಧಿಸೂಚನೆ

**ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಭಿವೃದ್ಧಿಪಡಿಸಿದ ಕೈಗಾರಿಕಾ ಪ್ರದೇಶಗಳಲ್ಲಿನ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.**

ಮಂಡಳಿಯ ಅಧಿಸೂಚನೆ ಸಂ:ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ:44705/19145/2023-24 ದಿನಾಂಕ:05-02-2024ರ ಮೂಲಕ ಅಧಿಸೂಚನೆ ಹೊರಡಿಸಿ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಿರುವ ವಿವಿಧ ಕೈಗಾರಿಕಾ ಪ್ರದೇಶಗಳಲ್ಲಿ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡಲು ಖಾಸಗಿ ಉದ್ಯಮ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ಉದ್ದಿಮೆದಾರರಿಂದ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ: 23.02.2024 ರೊಳಗೆ ಅರ್ಜಿ ಸಲ್ಲಿಸಲು ಮತ್ತು ದಿನಾಂಕ: 08.02.2024 ರಿಂದ ಮಂಡಳಿ ವೆಬ್‌ಸೈಟ್ ನಲ್ಲಿ **(www.kiadb.in)** ರಲ್ಲಿ ಪ್ರಕಟಿಸಲಾಗುವುದೆಂದು ತಿಳಿಸಲಾಗಿತ್ತು.

ಮುಂದುವರೆದು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಐ 78 ಎಸ್‌ಪಿಕ್ಯೂ 2021 ದಿ:05.02.2024 ರಲ್ಲಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆಗಾಗಿ ಲಭ್ಯವಿರುವ ಒಟ್ಟು ಸಿ.ಎ. ನಿವೇಶನಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಶೇ.24.10 ರಷ್ಟು ಮೀಸಲಾತಿಯನ್ನು ನಿಗದಿಪಡಿಸಿ ಆದೇಶಿಸಲಾಗಿದೆ. (ಮಂಡಳಿಯ ವೆಬ್‌ಸೈಟ್ **www.kiadb.in** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ). ಸದರಿ ಆದೇಶದನ್ವಯ, ದಿನಾಂಕ: 05.02.2024ರ ಅಧಿಸೂಚನೆಯಲ್ಲಿ ತಿಳಿಸಿರುವಂತೆ ದಿನಾಂಕ: **08.02.2024** ರಿಂದ ಮಂಡಳಿ ವೆಬ್‌ಸೈಟ್ **(www.kiadb.in)** ರಲ್ಲಿ ಪ್ರಕಟಿಸಲಾಗುವ ಹಂಚಿಕೆಗೆ ಪ್ರಸ್ತಾಪಿಸಿರುವ ಸಿಎ/ಅಮೆನಿಟಿ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಂಸ್ಥೆ/ಉದ್ಯಮದಾರರಿಗೆ ಶೇ.24.10 ರಷ್ಟು ನಿವೇಶನಗಳನ್ನು ಮೀಸಲಿಟ್ಟು ಪ್ರಕಟಿಸಲಾಗುವುದು.

ಮೂಲ ಅಧಿಸೂಚನೆ ಸಂ:ಕ.ಕೈ.ಪ್ರ.ಅ.ಮಂ/ಕೇ.ಕ/ಗಣಕ ಸಂ: 44705/19145/2023-24 ದಿನಾಂಕ: 05.02.2024 ರಲ್ಲಿ ಸೂಚಿಸಿರುವ ಷರತ್ತು ಮತ್ತು ನಿಬಂಧನೆಗಳು ಅನ್ವಯವಾಗುತ್ತದೆ.

ದಿನಾಂಕ: 07.02.2024 **ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ**
ಸ್ಥಳ: ಬೆಂಗಳೂರು **ಮತ್ತು ಕಾರ್ಯನಿರ್ವಾಹಕ ಸದಸ್ಯರು**

**ANNEXURE- 9**

# DETAILS OF ALLOTMENT OF CA/AMENITY PLOTS

| Sl. No | District | Industrial Area | Name of the unit | Plot No. | Extent (in acres) | Category | Activity | Remarks |
|---|---|---|---|---|---|---|---|---|
| 1. | **Bengaluru Urban** | Jigani 2nd Phase | Mr.Mohan Kumar Y N | CA-10-A | 0.58 | ST | Lodge & Restaurant | |
| 2. | | Hitech Defence & Aerospace Park (IT Sector) | M/s.Haritha Logistics & Warehousing Pvt. Ltd., | AM-1-P1 & AM-1-P4 | 10.64 | Gen | Self Sustainable Smart Office, Modern Commercial and Compact Residential Project for the employees of industries | |
| 3. | | Hitech Defence & Aerospace Park (IT Sector) | M/s.Arav Enterprises | AM-6-P4 | 2.90 | Gen | Hotel | |
| 4. | | Hitech Defence & Aerospace Park (Hardware Sector) | M/s.Advik Gateway | AM-3 | 2.17 | SC | Residential Apartment for the employees of industries | |
| 5. | | Hitech Defence & Aerospace Park (Hardware Sector) | M/s.Siddhartha Vihar Trust | AM-4 | 5.00 | SC | R & D Centre, Centre of Excellence & Training Institutes | The allottee has voluntarily surrendered the allotment on 20-09-2024 |
| 6. | **Bengaluru Rural** | Sompura 1st Stage | M/s.Karnataka Drugs & Pharmaceuticals Manufacturers Association | AM- 6-A | 0.26 | Gen | Research & Development Centre, Skill Development Centre and Analytical Laboratory | The allottee has voluntarily surrendered the allotment on 27-06-2024 |
| 7. | | Sompura 1st Stage | M/s.Coffee Point | AM-14-D | 0.17 | SC | Canteen | |
| 8. | | Sompura 1st Stage | M/s.Patil & Patil Infrastructure | AM-23 | 1.12 | Gen | Hotel | |
| 9. | | Sompura 1st Stage | M/s.NCL Enterprises | AM-23-P | 1.00 | SC | Housing Tenements/Apartments/Dormitories for the employees of Industries | |

| | | | | | | | | |
|---|---|---|---|---|---|---|---|---|
| 10. | | Sompura 1st Stage | M/s.Vinayaka Precisions | AM-24 | 0.65 | Gen | Skill Development Centre | |
| 11. | | Sompura 1st Stage | M/s.Hotel Ipcon | AM-27 | 2.22 | Gen | 3 Star Hotel | |
| 12. | | Obadenahalli (Doddaballapura 3rd Phase) | M/s.Trident Developers | CA-1 | 1.70 | Gen | Hotel & Petrol Bunk | |
| 13. | | Hitech Defence & Aerospace Park (Aerospace Sector) | M/s.ADU Infra | AM-1 | 5.65 | Gen | Air Cargo Complex | |
| 14. | | Hitech Defence & Aerospace Park (Aerospace Sector) | M/s. Rekha Enterprises | AM-2 | 2.08 | Gen | Air Cargo Complex | |
| 15. | | Hitech Defence & Aerospace Park (Aerospace Sector) | M/s. AMR Square | AM-3-P1 | 2.41 | SC/ST | Hotel, Resorts & Cottages | |
| 16. | | Hitech Defence & Aerospace Park (Aerospace Sector) | M/s.Brown Tree Hospitality | AM-3-P2 | 0.16 | Gen | Hotel Industry | |
| 17. | | Hitech Defence & Aerospace Park (Aerospace Sector) | M/s.Sharavathi BPO Services | AM-3-P3 | 0.43 | Gen | Industrial Canteen | |
| 18. | | Hitech Defence & Aerospace Park (Aerospace Sector) | M/s.Discovery Infra Ventures LLP | AM-4-A & AM-4-B | 5.00 | Gen | A next Gen Future School, Multidisciplinary knowledge with Innovation Hub, Industrial Research and Development Center Campus | |
| 19. | | Hitech Defence & Aerospace Park (Aerospace SEZ) | M/s.Vaigai Investments Pvt Ltd | AM-1 | 7.80 | Gen | R & D Centers | |

| | | | | | | | | |
|---|---|---|---|---|---|---|---|---|
| 20. | **Ramanagara** | Bidadi 2nd Phase Sector-1 | M/sSimposys Healthcare LLP | CA-2-P | 0.27 | Gen | R & D Centre | |
| 21. | | Bidadi 2nd Phase Sector-1 | M/s.Shree Shyam Infrastructure | CA-1 | 2.53 | SC | 1.Food Testing Laboratory, 2.Research and Development Centers, 3.Training Institute, 4.Hotels and Restaurant, 5.Apartments for the employees of industries | |
| 22. | | Bidadi 2nd Phase Sector-1 | M/s. Bio Agile Therapeutics Pvt. Ltd | CA-2 | 0.97 | Gen | R & D Centre | |
| 23. | | Bidadi 2nd Phase Sector-2 | M/s.Srujan Infrastructure | CA-1 | 4.96 | Gen | Construction of Apartments for the employees of industries | |
| 24. | | Harohalli 3rd Phase | M/s Guruprasad Bengle Enterprises | 665 | 2.00 | Gen | Skill Development & Training Institute | |
| 25. | | Harohalli 3rd Phase Womens Entrepreneurs park | M/s. Airav Enterprises | WP-1 | 3.95 | Gen | Housing Tenements/Apartment for the employees of industries | |
| 26. | **Chikkaballapura** | Gowribidnur 1st Phase | M/s Ditya Interior & Construction | CA-1 | 0.75 | Gen | Housing Tenements/Apartment for the employees of industries | |
| 27. | | Gowri-bidnur 1st Phase | M/s Shri Krishna Enterprises | CA-1-P | 0.29 | SC | Petrol Gas Station | |
| 28. | **Tumkur** | Vasantha-narasapura 1st Phase | M/s. ADU Infra | CA-1 | 7.75 | Gen | Air Cargo Complex | |
| 29. | **Dharawad** | Kelageri SC/ST Cluster | M/s. Mech Power Engineering Services | 2 | 0.52 | SC | Training Testing and Inspection on Safety Activity | |
| 30. | | Gamana-gatti 1st Stage | M/s.Venkateshwara Hotel | 106 | 0.50 | SC | Catering Services | |
| 31. | | Gamana-gatti 1st Stage | M/s.Sanjeevini Multispeciality Hospital | 152 | 1.03 | SC | Hospitality Services | |

| | | | | | | | | |
|---|---|---|---|---|---|---|---|---|
| 32. | **Hassan** | Thimmenahalli | M/s.Saffron Enterprises | 1-CA | 1.00 | Gen | Hotel & Petrol Pump | |
| 33. | **Mandya** | Hebbal 2nd Phase | M/s Ecolife Projects | 2-Part CA | 1.20 | Gen | Housing - Affordable Apartment for the employees of industries | |
| 34. | | Hebbal 2nd Phase | M/s.V N Hotels | CA-4-P | 0.82 | SC | Hotel | |
| 35. | **Chamarajanagara** | Badanaguppe Kellamballi | M/s Banashankari Chemicals private Limited | 22 | 9.60 | Gen | 1.Construction of Apartments for the employees of industries, 2.Guest House, 3. Hotel and Restaurant, 4.Petrol Pump, CNG, EV Charging Station | |
| 36. | **Vijayapura** | Mahalbhagayat | Shubahada Santosh Gani | CA-73 | 1.44 | Gen | Technical Institute for Skill Development & Training Centre | |
| 37. | **Raichur** | Manvi | M/s.Shivaganga Enterprises | 1-A | 2.28 | Gen | Petrol & Diesel Pump, CNG Filling Station, EV Charging Station, Weigh Bridge 60 MT Capacity, Hotel, Lodging & Boarding | |
| 38. | | Manvi | M/s.Nayana Enterprises | 1-A-P | 0.72 | ST | 60 MT Capacity of Weigh Bridge | |
| 39. | | Yaramaras | M/s.Sapthagiri Inn | 5 | 0.85 | Gen | Hotel & Dormitories for the employees of industries | |
| 40. | | Yaramaras | M/s.Naksh Enterprises | 26 | 0.60 | ST | 60 MT Capacity of Weigh bridge | |
| 41. | **Udupi** | Nandikur | M/s.Rashtriya Groups | A3 | 0.62 | ST | Lodge & Restaurant | |
| | | | | **Total** | **96.59** | | | |

Secretary-I
Karnataka Industrial Areas Development Board
Bengaluru - 560 001.

Secretary-II
Karnataka Industrial Areas Development Board
Bengaluru-560 001.

**JOINT DIRECTOR**
**Karnataka Industrial Areas Development Board**
**Head Office, Bengaluru**

ANNEXURE-10

| KARNATAKA INDUSTRIAL AREAS DEVELOPMENT BOARD | | | |
|---|---|---|---|
| DISTRICT WISE DETAILS OF LITIGATION FREE CA/AMENITY VACANT PLOTS | | | |
| **Sl. No** | **District** | **Total No of CA/AM plos** | **Extent in acres** |
| 1 | Bengaluru Rural | 10 | 21.85 |
| 2 | Ramanagara | 3 | 1.62 |
| 3 | Tumkur | 43 | 75.75 |
| 4 | Kolar | 13 | 19.58 |
| 5 | Chikkaballapura | 6 | 14.21 |
| 6 | Chikkamagaluru | 2 | 0.94 |
| 7 | Mysore | 12 | 23.91 |
| 8 | Mandya | 1 | 1.38 |
| 9 | Chamarajanagara | 2 | 4.2 |
| 10 | Davanagere | 4 | 5.98 |
| 11 | Belagavi | 3 | 16.66 |
| 12 | Vijayapura | 5 | 25.02 |
| 13 | Kalaburgi | 12 | 9.24 |
| 14 | Yadgir | 3 | 13.38 |
| 15 | Dakshina Kannada | 6 | 4.436 |
| 16 | Udupi | 9 | 4.27 |
| 17 | Dharwad | 10 | 27.36 |
| 18 | Gadag | 3 | 3.63 |
| | **Total** | **147** | **273.4** |

Secretary-I
Karnataka Industrial Areas Development Board
Bengaluru - 560 001.

Secretary-II
Karnataka Industrial Areas Development Board
Bengaluru-560001.

JOINT DIRECTOR
Karnataka Industrial Areas Development Board
Head Office, Bengaluru

ANNEXURE- II

| District: Tumkur | | | Name of the Indl. Area: Sira | |
|---|---|---|---|---|
| Sl.No. | CA/Amenity Plot No. | Extent (in acres) | Tentative Allotment rate per acre (Rs.in lakhs) | Remarks |
| 1 | AM3P | 2.14 | 62.00 | Physically Vacant |
| 2 | AM4P | 2.57 | 62.00 | Physically Vacant |
| 3 | AM-2 | 1.71 | 62.00 | Physically Vacant |
| 4 | AM-3 | 6.25 | 62.00 | Physically Vacant |
| 5 | AM-4 | 2.24 | 62.00 | Physically Vacant |
| 6 | AM-5 | 2.51 | 62.00 | Physically Vacant |
| 7 | AM-6 | 1.18 | 62.00 | Physically Vacant |
| 8 | AM-7 | 1.74 | 62.00 | Physically Vacant |
| | Total | 20.34 | | |

25.09.24
AE,
KIADB, Tumakuru

AEE
KIADB, Tumakuru

25/9/24
EE
KIADB, Tumakuru